–                                                              ಸಿ ಸಿ ನಂ. 99/2018

ಪಿಡಬ್ಲುಃ1

ಸಾಕ್ಷಿಯನ್ನು ದಿಃ14.12.2021 ರಂದು ಕರೆಸಲಾಯಿತು. ಪ್ರಮಾಣ ಭೋದಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ ವಿ ಎನ್ ವಕೀಲರಿಂದಃ

ನಾನು ಎಸ್ ಎಸ್ ಎಲ್ ಸಿ ವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು ವೃತ್ತಿಯಲ್ಲಿ ಒಕ್ಕಲುತನ ಮಾಡುತ್ತಿದ್ದೇನೆ. ಸಾಕ್ಷಿ ಮುಂದುವರೆದು ನಾನು ಟೈಲರಿಂಗ್ ಕೆಲಸ ಸಹ ಮಾಡುತ್ತಿದ್ದೇನೆ. ಆರೋಪಿ ಸರ್ಕಾರಿ ಶಾಲೆಯಲ್ಲಿ ಶಿಕ್ಷಕರು ಎಂದರೆ ಸರಿ. ಆರೋಪಿಗೆ ತನ್ನ ನೌಕರಿಯಿಂದ ಪ್ರತಿತಿಂಗಳು 50 – 60 ಸಾವಿರ ಸಂಬಳ ಇದೆ ಎಂದರೆ ಸಾಕ್ಷಿ ನನಗೆ ಅವರ ಸಂಬಳ ಎಷ್ಟು ಎಂದು ಗೊತ್ತಿಲ್ಲ ಎನ್ನುತ್ತಾರೆ. ನಾನು 2018 ರವರೆಗೆ ಟೈಲರಿಂಗ್ ಕೆಲಸ ಮಾಡುತ್ತಿದ್ದೆ. ನಾನು ಬೇಲೂರಿನ ಪಂಪ್ ಹೌಸ್ ರಸ್ತೆಯಲ್ಲಿ ಟೈಲರಿಂಗ್ ಕೆಲಸ ಮಾಡುತ್ತಿದ್ದೆ.

ನಾನು ಟೈಲರಿಂಗ್ ಕೆಲಸವನ್ನು ಬಾಡಿಗೆ ಅಂಗಡಿಯಲ್ಲಿ ಮಾಡುತ್ತಿದ್ದೆ. ಸದರಿ ಕೆಲಸದಿಂದ ಪ್ರತಿದಿನ **500-1000** ರೂಪಾಯಿ ಸಂಪಾದನೆ ಮಾಡುತ್ತಿದ್ದೆ. ನನಗೆ ಒಬ್ಬನೇ ಮಗ. ಆರೋಪಿ ಬೇಲೂರು ತಾಲ್ಲೂಕು ಲಕ್ಷ್ಮೀಪುರದ ವಾಸಿ. ಸಾಕ್ಷಿ ಮುಂದುವರೆದು ಸದರಿಯವರು ಬೇಲೂರಿನ ಪಂಪ್ ಹೌಸ್ ರಸ್ತೆಯಲ್ಲಿ ವಾಸವಿದ್ದರು ಹಾಲಿ ಅವರು ಹಾಸನದಲ್ಲಿ ವಾಸವಿದ್ದಾರೆ ಎನ್ನುತ್ತಾರೆ. ಬೇಲೂರು ತಾಲ್ಲೂಕು ಲಕ್ಷ್ಮೀಪುರದಲ್ಲಿ ಆರೋಪಿಗೆ ಸೇರಿದ ಸ್ಥಿರಾಸ್ತಿ ಇದೆ. ಆರೋಪಿಗೆ ಸದರಿ ವಿಳಾಸದಲ್ಲಿ ಸ್ವಲ್ಪ ಜಮೀನು ಹಾಗೂ ಮನೆ ಇದೆ. ಆರೋಪಿಗೆ ಸುಮಾರು ಮೂರ್ನಾಲ್ಕು ಎಕರೆ ಜಮೀನು ಇರಬಹುದು. ಆರೋಪಿ ಜಮೀನಿನಲ್ಲಿ ಭತ್ತ ಮತ್ತು ರಾಗಿ ಬೆಳೆಯುತ್ತಾರೆ ಎಂದರೆ ಸಾಕ್ಷಿ ಸದರಿ ಜಮೀನಿನಲ್ಲಿ ಅಡಿಕೆ , ಕಾಫಿ ಇದೆ ಎನ್ನುತ್ತಾರೆ. ಆರೋಪಿಗೆ ವ್ಯವಸಾಯದಿಂದ ಎಷ್ಟು ಆದಾಯ ಇದೆ ಎಂದು ನನಗೆ ಗೊತ್ತಿಲ್ಲ. ಸದರಿಯವರಿಗೆ ವ್ಯವಸಾಯದಿಂದ ಸುಮಾರು **4-5** ಲಕ್ಷ ವರಮಾನ ಇದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿ ತಂದೆಗೆ ಆರೋಪಿ ಒಬ್ಬನೇ ಮಗ ಎಂದರೆ ಸರಿ. ಆರೋಪಿ ತಂದೆ-ತಾಯಿ ತೀರಿಕೊಂಡಿದ್ದಾರೆ ಎಂದರೆ ಸರಿ. ಆರೋಪಿ ತಂದೆ-ತಾಯಿ ತೀರಿಕೊಂಡು ಸುಮಾರು **8-10** ವರ್ಷಗಳು ಆಗಿದೆ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು. )

(ಉಕ್ತಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಣ ಯಂತ್ರದ ಮೂಲಕ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಒ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು.